**ದಿನಾಂಕಃ 13/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ- ಶ್ರೀ ಜೆ.ಯು.ಆರ್. ವಕೀಲರಿಂದ**

ಈ ದಾವೆಯನ್ನು ಹೂಡಿದ 4 ವರ್ಷಗಳ ನಂತರ ನಾನು ನಿ.ಪಿ 18ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಾನು ನಿ.ಪಿ 18ನ್ನು ಪಡೆದುಕೊಳ್ಳುವ ಮುಂಚೆ ಕಂದಾಯ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಸ್ಥಳ ಮಹಜರನ್ನು ಮಾಡಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ನೋಟರಿ ವಕೀಲರ ಬಳಿ ಪ್ರಮಾಣ ಪತ್ರವನ್ನು ಮಾಡಿಸಿ ಅದನ್ನು ನಾಡಕಛೇರಿಗೆ ಕೊಟ್ಟಿರುತ್ತೇನೆ. ಅಲ್ಲಿಂದ ಅದನ್ನು ತಹಶೀಲ್ದಾರವರಿಗೆ ಕಳುಹಿಸಿದ ನಂತರ ಅದು ಅಪ್ರೂವ್ ಆಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ 18ರಲ್ಲಿ ಕಂದಾಯ ನಿರೀಕ್ಷಕರದ್ದಾಗಲೀ, ತಹಶೀಲ್ದಾರರವರದ್ದಾಗಲೀ, ಗ್ರಾಮ ಲೆಕ್ಕಾಧಿಕಾರಿಯವರದ್ದಾಗಲೀ ಸಹಿ ಇಲ್ಲ ಅದನ್ನು ನೀವೇ ಬರೆಸಿ ನೋಟರಿ ಮಾಡಿಸಿ ತಂದು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಪ್ರಮಾಣ ಪತ್ರವನ್ನು ಮಾಡಿಸಿ ನಾಡಕಛೇರಿಗೆ ಕೊಟ್ಟು ನಂತರ ಅದು ತಹಶೀಲ್ದಾರರವರಿಗೆ ಹೋಗಿ ಅದು ಅಲ್ಲಿಂದ ಬಂದ ನಂತರ ನಾನು ನ್ಯಾಯಾಲಯಕ್ಕೆ ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ 18ರಲ್ಲಿ ಕಂದಾಯ ನಿರೀಕ್ಷಕರದ್ದಾಗಲೀ, ತಹಶೀಲ್ದಾರರವರದ್ದಾಗಲೀ, ಗ್ರಾಮ ಲೆಕ್ಕಾಧಿಕಾರಿಯವರದ್ದಾಗಲೀ ಸಹಿ ಇಲ್ಲ ಎಂದರೆ ಸರಿ. ನಿ.ಪಿ 18ನ್ನು ಈ ದಾವೆಯನ್ನು ಹೂಡುವ ಸಮಯದಲ್ಲಿ ಏತಕ್ಕಾಗಿ ಹಾಕಿಲ್ಲ ಎಂದರೆ ಸಾಕ್ಷಿಯು ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ನಿ.ಪಿ 19 ರಲ್ಲಿ ಸದರಿ ದೃಢೀಕರಣ ಪತ್ರ ಯಾವ ಸರ್ವೆ ನಂಬರ್ ಹಾಗೂ ಯಾವ ಜಮೀನಿಗೆ ಸಂಬಂಧಪಟ್ಟಿದ್ದು ಎಂಬುದು ಇಲ್ಲ ಎಂದರೆ ಸಾಕ್ಷಿಯು ನಾವು ಒಂದು ನಿರ್ದಿಷ್ಟ ನಮೂನೆಯ ಅರ್ಜಿಯಲ್ಲಿ ವಿಷಯಗಳನ್ನು ತುಂಬಿಸಿ ಕೊಡುತ್ತೇವೆ ಆ ಪ್ರಕಾರ ದೃಢೀಕರಣ ಪತ್ರವನ್ನು ಕೊಡುತ್ತಾರೆ ಎಂದು ನುಡಿಯುತ್ತಾರೆ.

ನಿ.ಪಿ 11 ನ್ನು ಮಂಜುನಾಥರವರ ಮಾಡಿಕೊಟ್ಟಿರುತ್ತಾರೆ. ಅದನ್ನು ಯಾವ ದಿನಾಂಕದಂದು ಮಾಡಿಕೊಟ್ಟಿರುತ್ತಾರೆ ಎಂದು ನನಗೆ ದಿನಾಂಕ ನೆನಪಿಲ್ಲ. ನಿ.ಪಿ 11 ನಾವು ಸೃಷ್ಟಿಸಿರುವುದು ಎಂದರೆ ಸರಿಯಲ್ಲ. ಚೆಕ್ಕುಬಂದಿ ಬರೆಯಬೇಕಾದರೆ ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬರುತ್ತಾರೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಅನುಭವ ಇಲ್ಲ ಎಂದರೆ ಸರಿಯಲ್ಲ.

ನಾನೇ ಪ್ರತಿವಾದಿಗೆ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.